ಅಭಿಪ್ರಾಯ ಇದೆ. ಲೀವ್ಸ್ ಫಂಗಸ್ ಇರುವುದರಿಂದ ಹೆಚ್ಚಾಗಿ ಸ್ಪ್ರೇ ಮಾಡಬೇಕು. ಮತ್ತೊಂದು ತಿಂಗಳವರೆಗೂ ಆ ಎಲೆಯನ್ನು ಮಾತ್ರ ಉಪಯೋಗ ಮಾಡಬಾರದು. ಏಕೆಂದರೆ ಮನುಷ್ಯರ ಆರೋಗ್ಯಕ್ಕೆ ಒಳ್ಳೆಯದಲ್ಲವೆಂಬ ಅಭಿಪ್ರಾಯವಿದೆ.

ಶ್ರೀ ಸಿ. ಬೈರೇಗೌಡ — ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ರೈತರು ಏನೇನು ಮಾಡಬೇಕು ಎಂಬುದನ್ನು ಓದಿದ್ದಾರೆ. ಆದರೆ ಅದನ್ನು ರೈತರಿಗೆ ಮುಟ್ಟಿಸುವ ಕಾರ್ಯಕ್ರಮ ಆಗಬೇಕು. ಬರೀ ಕಾಗದದಲ್ಲಿ, ಪುಸ್ತಕದಲ್ಲಿ ಓದಿದರೆ ಆಗುವುದಿಲ್ಲ. ರೈತರು ಈ ಕೆಲಸಗಳನ್ನು ಮಾಡುವುದಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? ರೈತರಿಗೆ ಇದಾವುದನ್ನೂ ಮುಟ್ಟಿಸತಕ್ಕ ಸಂದರ್ಭ ಇಲ್ಲ. ಆದ್ದರಿಂದ ರೈತರಿಗೆ ಮುಟ್ಟಿಸತಕ್ಕ ಕೆಲಸ ಏನು ಮಾಡುತ್ತಾರೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಆರ್.ಎನ್. ನಾಯಕರು ಕೇಳಿರತಕ್ಕದ್ದು ಈ ಡಿಸೀಸ್ ತೆಗೆಯತಕ್ಕ ವಿಧಾನ ಏನು ಎಂದು ಕೇಳಿದಕ್ಕೆ ವಿವರ ಕೊಟ್ಟಿದ್ದೇನೆ. ರೈತರು ಔಷಧ ಉಪಯೋಗ ಮಾಡಿ ಕಾಯಿಲೆ ಕಂಟ್ರೋಲ್ ಮಾಡಿರತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ, ಪೂರ್ತಿ ರೋಗ ಹೋಗಿದೆ ಎಂದು ಹೇಳುವುದಿಲ್ಲ. ಬರತಕ್ಕ ಔಷಧಗಳಿಂದ ಸಂಪೂರ್ಣವಾಗಿ ಕಂಟ್ರೋಲ್ ಮಾಡುವುದಕ್ಕೆ ಆಗದೇ ಇದ್ದರೆ ಮತ್ತೊಂದು ಔಷಧವನ್ನು ಕಂಡುಹಿಡಿಯಬೇಕು ಎಂದು ತಜ್ಞರ ಅಭಿಪ್ರಾಯ ಇದೆ. ಹುಸ್ತಪ್ರತಿ ಆಚ್ಚುಹಾಕಿಸಿ ಹಂಚತಕ್ಕದ್ದು. ರೈತ ಸಮುದಾಯಕ್ಕೆ ಹೇಳತಕ್ಕದ್ದು. ರೇಡಿಯೊ ಮೂಲಕ ತಿಳಿಸತಕ್ಕದ್ದು ಏನಿವೆ, ಇವೆಲ್ಲಾ ಕೆಲವು ವಿಧಾನಗಳು. ಈ ಬಗ್ಗೆ ಪ್ರಚಾರ ಸಾಲದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ರೈತರಿಗೆ ಈ ಮಾಹಿತಿಗಳನ್ನು ತಲುಪಿಸತಕ್ಕ ವ್ಯವಸ್ಥೆಯನ್ನು ನಾನು ಶೀಘ್ರವಾಗಿ ಮಾಡಿಸುತ್ತೇನೆ.

ಶ್ರೀ ಎಂ. ಮಾಹದೇವ್.—ಮಾನ್ಯ ಅಧ್ಯಕ್ಷರೆ, ನಮ್ಮ ನಂಜನಗೂಡು ರಸಬಾಳೆ ಬಹಳ ಪ್ರಸಿದ್ಧವಾದ ಹಣ್ಣು. ಈ ಸವಿಯಾದ ಬಾಳೆ ಈಗ ನಶಿಸಿಹೋಗುತ್ತಿದೆ. ಅದನ್ನು ಇಲಾಖೆಯವರು ರಕ್ಷಣೆ ಮಾಡಬೇಕು. ಅದನ್ನು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಏನು ಕ್ರಮ ಸರ್ಕಾರ ತೆಗೆದುಕೊಂಡಿದೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳಿಂದ ನಾನು ಉತ್ತರ ನಿರೀಕ್ಷೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ. ನಂಜನಗೂಡು ರಸಬಾಳೆ ಹೆಸರು ಬಾಳೆ ರಸಬಾಳೆ ಎಂಬ ಬಗ್ಗೆ ಮತ್ತೊಂದು ಅಭಿಪ್ರಾಯ ಇಲ್ಲ. ಅದು ನಶಿಸಿಹೋಗುತ್ತಿರತಕ್ಕ ವಿಷಯ ನಮಗೂ ಗೊತ್ತಿದೆ. ಏನಾದರೂ ಮಾಡಿ ಅದನ್ನು ಉಳಿಸಬೇಕು ಎಂದು ಇಲಾಖೆಯವರು ಪ್ರಯತ್ನ ಪಟ್ಟಿದ್ದಾರೆ. ಅದು ಸಂಪೂರ್ಣ ನಾಶವಾಗಿಲ್ಲ, ಸ್ವಲ್ಪ ಉಳಿದಿದೆಯೆಂಬುದೇ ಸಮಾಧಾನದ ಸಂಗತಿ. ಹೆಚ್ಚಾಗಿ ಬೆಳೆಸುವುದಕ್ಕೆ ಬೇಕಾದ ತ್ವರಿತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ವಾಟಾಳ್ ನಾಗರಾಜ್ ಅವರೇ. ನಿಮ್ಮ ಪ್ರಶ್ನೆಯನ್ನು ರೂರಲ್ ಡೆವಲಪ್ಮೆಂಟ್ ಮಿನಿಸ್ಟರ್ ಅವರಿಗೆ ವರ್ಗ ಮಾಡಲಾಗಿದೆ. ಮುಂದಿನ ವಾರ ಉತ್ತರ ಬರುತ್ತದೆ.

ಪ್ರಶ್ನೆ ಸಂಖ್ಯೆ : ೨೧೧ (೭೦೮)

ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆ ಸಂಖ್ಯೆ : ೨೧೨ (೨೮೨)

ಸದಸ್ಯರು ಹಾಜರಿರಲಿಲ್ಲ.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನಲ್ಲಿರುವ ಶಾಲೆಗಳು

೬೧೧. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನವರು ಪ್ರಾರಂಭಿಸಿದ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು ;

ಆ) ಅವುಗಳನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗಿದೆ ;

ಇ) ಅವುಗಳಿಗೆ ಸರ್ಕಾರ ಮಂಜೂರಾತಿ ನೀಡಲು ಉದ್ದೇಶಿಸಿದೆಯೇ

ಶ್ರೀ ಎಸ್. ಬಂಗಾರಪ್ಪ (ಶಿಕ್ಷಣ ಮಂತ್ರಿಗಳು).—

ಅ) ೧೭.

ಆ) ೯ ಶಾಲೆಗಳನ್ನು ೧೯೮೮-೮೯ ಹಾಗೂ ೮ ಶಾಲೆಗಳನ್ನು ೧೯೮೯-೯೦ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಕುಶಾಲ.—(ಇ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಆದರೆ ಈ ಹಿಂದೆ ಜಿಲ್ಲಾ ಪರಿಷತ್ತಿನವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೮-೮೯ರಲ್ಲಿ ೯ ಮತ್ತು ೮೯-೯೦ರಲ್ಲಿ ೮ ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡಿರುವುದಕ್ಕೆ ಈವರೆಗೆ ಸರ್ಕಾರದ ಅನುಮೋದನೆ ಆಗಿಲ್ಲ. ೧೯೮೮-೮೯ರಲ್ಲಿ ಮಂಜೂರಾತಿ ನೀಡಿದ ಶಾಲೆಗೆ ಸರ್ಕಾರ ಅನುಮೋದನೆ ನೀಡದಿದ್ದರಿ ೧೯೯೦-೧೯೯೧ರ ಮಾರ್ಚ್ ತಿಂಗಳಲ್ಲಿ ಎಸ್ ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗತಕ್ಕ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಸರ್ಕಾರ ಕೂಡಲೇ ಮಂಜೂರಾತಿ ನೀಡುವುದೆ ಎಂದು ಕೇಳಬಯಸುತ್ತೇನೆ ?

ಶ್ರೀ ಕೆ.ಹೆಚ್. ರಂಗನಾಥ್.—ಸರ್ಕಾರ ಈ ದಿಸೆಯಲ್ಲಿ ಶೀಘ್ರ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಕುಶಾಲ.—ಅದೇ ರೀತಿ ಪ್ರಸಕ್ತ ಸಾಲಿನಲ್ಲಿ ಜಿಲ್ಲಾ ಪರಿಷತ್ತು ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡಿದ್ದಕ್ಕೆ ಸರ್ಕಾರ ಅನುಮೋದನೆ ನೀಡುವುದೆ ಹಾಗೂ ಖಾಸಗಿ ಶಾಲೆಗಳಿಗೂ ಅನುಮೋದನೆ ನೀಡುವುದೆ ?

ಶ್ರೀ ಕೆ.ಹೆಚ್. ರಂಗನಾಥ್.—ಆ ಪ್ರಶ್ನೆ ಉದ್ಭವಿಸುವುದಿಲ್ಲ,

ಸರಕಾರಿ ಹಾಗೂ ನಗರ ಸಭೆಯ ಶಾಲೆಗಳು ಹಾಗೂ ಮಹಾವಿದ್ಯಾಲಯಗಳು

೫೭೩. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ಸರಕಾರಿ ಶಾಲಾ ಕಾಲೇಜುಗಳಲ್ಲಿ ಪ್ರಯೋಗಾಲಯದ ಸಾಮಗ್ರಿ ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕನುಗುಣವಾಗಿಲ್ಲದಿರುವುದು ನಿಜವಲ್ಲವೆ ;

ಆ) ಹಾಗಿದ್ದಲ್ಲಿ ಇದನ್ನು ಸರಿತೂಗಿಸಲು ಸರ್ಕಾರದವರು ಕೈಗೊಂಡ ಅಥವಾ ಕೈಗೊಳ್ಳಲಿರುವ ಪರಿಣಾಮಕಾರಿ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಕಾಲೇಜು ಮತ್ತು ತಾಂತ್ರಿಕ ಇಲಾಖೆಗೆ ಸಂಬಂಧಿಸಿದಂತೆ ಪ್ರಯೋಗಾಲಯದ ಸಾಮಗ್ರಿಗಳು ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕೆ ಸಮಾನಾಗಿರುತ್ತದೆ. ಆದರೆ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಯೋಗಾಲಯದ ಸಾಮಗ್ರಿಗಳು ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕೆ ಅನುಕೂಲವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪ್ರಯೋಗಾಲಯದ ಶುಲ್ಕವನ್ನು ಸರ್ಕಾರಿ ಶಾಲಾ ಕಾಲೇಜುಗಳ ಮುಖ್ಯಸ್ಥರ ಖಾತೆಯಲ್ಲಿ ಇರಿಸಿ ಪ್ರಯೋಗಾಲಯದ ಸಾಮಗ್ರಿಗಳನ್ನು ಖರೀದಿಸಲು ಬಳಸಿಕೊಳ್ಳುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಶಿಕ್ಷಣ ಸಚಿವರು ಉತ್ತರಿಸಿರುವುದರಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪದವಿ ಕಾಲೇಜುಗಳಲ್ಲಿ ಎಲ್ಲಾ ಅನುಕೂಲತೆ ಇದೆ, ಆದರೆ ಪದವಿಪೂರ್ವ ಕಾಲೇಜುಗಳಲ್ಲಿ ಮತ್ತು ಪ್ರೌಢಶಾಲೆಗಳಲ್ಲ ಪ್ರಯೋಗಾಲಯಕ್ಕೆ ಸಂಬಂಧಪಟ್ಟ ಹಾಗೆ ಅನುಕೂಲ ಇಲ್ಲವೆಂದು ಹೇಳಿದ್ದಾರೆ. ಅದನ್ನು ಯಾವಾಗ ಸರಿಪಡಿಸುತ್ತೀರಿ.

ಶ್ರೀ ಕೆ. ಹೆಚ್. ರಂಗನಾಥ್.—ಅದಕ್ಕೆ ಒಂದು ವ್ಯವಸ್ಥಿತವಾದ ಯೋಜನೆಯನ್ನು ಹಾಕಬೇಕಿನಿಸುತ್ತದೆ. ಏತಕ್ಕೆಂದರೆ ನಾವು ಶಾಲೆಗಳನ್ನು ತೆರೆಯುವುದಕ್ಕೆ ಮೊದಲು ಕಟ್ಟಡ,